ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರಿದ ಪಾಟೀ ಸವಾಲು ವಾದಿ ಪರ ವಕೀಲವರಿಂದಃ</u>

ವಾದಿ ಮತ್ತು 3ನೇ ಪ್ರತಿವಾದಿಗೆ ಕ್ರಯದ ಹಣ ನೀಡಿರುವ ಬಗ್ಗೆ ಮತ್ತು Consideration ಕೊಟ್ಟಿರುವ ಬಗ್ಗೆ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದು ಅದಕ್ಕೆ ಸಂಬಂಧಪಟ್ಟ ದಾಖಲೆ ಹಾಜರುಮಾಡಿರುತ್ತೇನಾ ಎಂದರೆ ಮಾಡಿರುವುದಿಲ್ಲ. 2ನೇ ಪ್ರತಿವಾದಿ ವಾದಿ ಮತ್ತು 3ನೇ ಪ್ರತಿವಾದಿಗೆ ನಗದು ಮೂಲಕ ಕ್ರಯದ ಹಣವನ್ನು ಕೊಟ್ಟಿರುತ್ತಾರೆ. ಲಿಖಿತ ಹೇಳಿಕೆಯಲ್ಲಿ 2ನೇ ಪ್ರತಿವಾದಿ ಚೆಕ್ ಮೂಲಕ ಹಣ ನೀಡಿರುತ್ತಾರೆ ಎಂದು ಉಲ್ಲೇಖ ಇದೆ ಎಂದರೆ ಸಾಕ್ಷಿಯು ಅದು ಸರಿ ಇರಬಹುದು ಎಂದು ನುಡಿಯುತ್ತಾರೆ. ಚೆಕ್ ಮೂಲಕ ಹಣ ನೀಡಿದ ಬಗ್ಗೆ ದಾಖಲೆಯನ್ನು ಹಾಜರುಮಾಡಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಅದು ನಮ್ಮ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಕ್ಕೆ ಸಂಬಂಧಪಟ್ಟಂತೆ ವಾದಿ ಮತ್ತು 3ನೇ ಪ್ರತಿವಾದಿ ಹಾಗೂ 2ನೆ ಪ್ರತಿವಾದಿ ಗಳು ಕ್ರಯದ ಹಣ ಪಾವತಿಸಿದ ಸಮೇತ ಎಲ್ಲಾ ದಾಖಲಾತಿಗಳನ್ನು ನಾವು ಪಡೆದುಕೊಂಡಿರುತ್ತೇವಾ ಎಂದರೆ ಪಡೆದುಕೊಂಡಿರುತ್ತೇವೆ. 2ನೇ ಪ್ರತಿವಾದಿಯಿಂದ ಪಡೆದುಕೊಂಡ ಎಲ್ಲಾ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಮಾಡಿರುತ್ತೇನೆ. ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ಬೆಂಗಳೂರಿನ ವೆಕೇಷನ್ ನ್ಯಾಯಾಲಯದಲ್ಲಿ ನಾವು ಒಂದು ದಾವೆಯನ್ನು ಸಲ್ಲಿಸಿದ್ದು ನಂತರ ಅದನ್ನು ವಾಪಸ್ಸು ತೆಗೆದುಕೊಂಡು ರಾಮನಗರದಲ್ಲಿ ದಾವೆ ಸಲ್ಲಿಸಿರುತ್ತೇವೆ. ಬೆಂಗಳೂರಿನ ವೆಕೇಷನ್ ನ್ಯಾಯಾಲಯದಲ್ಲಿ ಹಾಕಿದ್ದ ದಾವೆಯಲ್ಲಿ ನಾವು ಕೋರಿದ್ದ ಪರಿಹಾರ

ಸಿಕ್ಕಿರುವುದಿಲ್ಲ ಎಂದರೆ ಸರಿ. ರಾಮನಗರದ ಓಎಸ್ 15/2006 ನಲ್ಲಿ ನಮಗೆ ಯಾವುದೇ ಪರಿಹಾರ ಸಿಕ್ಕಿರುವುದಿಲ್ಲ ಎಂದರೆ ಸರಿ. ಓಎಸ್ 15/2006 ದಾವೆಯನ್ನು ನಾವು ವಾಪಸ್ಸು ಪಡೆದುಕೊಂಡಿರುತ್ತೇವೆ. ಯಾಕೆ ವಾಪಸ್ಸು ತೆಗೆದುಕೊಂಡಿರುತ್ತೇವೆ ಎಂದರೆ ನಮ್ಮ ವಕೀಲರನ್ನು ಕೇಳಬೇಕು ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ನಮಗೆ ಇರುವ ವಕೀಲರು ಮೇಲೆ ಹೇಳಿದ ದಾವೆಯಲ್ಲಿ ವಕೀಲರಾಗಿದ್ದರು. ಓಎಸ್ 15/2006 ವಾಪಸ್ಸು ತೆಗೆದುಕೊಂಡ ನಂತರ ಅದೇ ಪರಿಹಾರ ಕೋರಿ ಅದೇ ನ್ಯಾಯಲಾಯದಲ್ಲಿ ಓಎಸ್ ಸಂಖ್ಯೆ 78/2006 ದಾವೆ ಹೂಡಿರುತ್ತೇವೆ ಎಂದರೆ ಸರಿ. ಆ ದಾವೆಯಲ್ಲಿ ಯಾಥಾ ಸ್ಥಿತಿ maintain ಮಾಡಬೇಕೆಂದು ಆದೇಶ ಆಗಬೇಕಿತ್ತು ಎಂದರೆ ಸರಿ. ಅದು continue ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ದಾವೆ ಓಎಸ್ 80/2016 ಎಂದು ರಾಮನಗದ ಕಿರಿಯ ಶ್ರೇಣಿ ನ್ಯಾಯಾಲಯಕ್ಕೆ Return ಆಗಿ ತನಿಖೆಗೆ ಬಾಕಿ ಇದೆ ಎಂದರೆ ಸರಿ. ಅದರಲ್ಲಿ ಮಧ್ಯಂತರ ಆದೇಶಗಳು ಅಗಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿ ಹಾಗೆಯೇ ಖಾಲಿ ಜಾಗವಾಗಿ ಇದೆ. 2 ನೇ ಪ್ರತಿವಾದಿ 3 ನೇ ಪ್ರತಿವಾದಿ ಪರವಾಗಿ Conversion charges ನ್ನು ಕಟ್ಟಿರುತ್ತಾರೆ. ಅವರು ಯಾವ ಬ್ಯಾಂಕ್ ನಲ್ಲಿ ಕಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. Conversion charges ಕಟ್ಟಿರುವ ಬಗ್ಗೆ ರಶೀದಿಯನ್ನು ನಮಗೆ ತೋರಿಸಿರುತ್ತಾರೆ ಆದರೆ ಹೇಗೆ ಕಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. Conversion charges ರಶೀದಿಯನ್ನು ನಾವು ಪಡೆದುಕೊಂಡಿರುವುದಿಲ್ಲ ಆದರೆ ನಮಗೆ ತೋರಿಸಿರುತ್ತಾರೆ. ನಾನು ಹೇಳಿದ ಹಾಗೆ 10 ಲಕ್ಷ ಕ್ರಯದ ಹಣ ಮತ್ತು ಹೆಚ್ಚುವರಿಯಾಗಿ ಒಂದು ಎಕರೆಗೆ ಎರಡೂವರೆ ಲಕ್ಷ ಹಣವನ್ನು ಪಾವತಿಸಿರುತ್ತೇವೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಮತ್ತು ದಾವಾ ಆಸ್ತಿಗೆ ಸಂಬಂಧ ಇರುವುದಿಲ್ಲ ಮತ್ತು ಅವರು ಯಾವುದೇ Conversion ಮಾಡಿಸಿರುವುದಿಲ್ಲ ಮತ್ತು ಯಾವುದೇ Conversion charges ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳು ಮತ್ತು 3 ನೇ ಪ್ರತಿವಾದಿ ಒಟ್ಟು ಕುಟುಂಬದಲ್ಲಿದ್ದು 3 ನೇಪ್ರತಿವಾದಿ ದಾವಾ ಆಸ್ತಿಗೆ ಸಂಬಂಧಪ್ಪಂತೆ Conversion charges ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿಃ15-12-1998 ರಂದು 3 ನೇ ಪ್ರತಿವಾದಿ ಹೆಸರಿಗೆ Conversion ಆಗಿರುತ್ತದೆ ಎಂದರೆ ಸರಿ.

ಮುಂದುವರಿದ ಪಾರ್ಟೀ ಸವಾಲನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಕೆ. ಶ್ರೀವಿದ್ಯಾ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.

ಮಧ್ಯಾಹ್ನ 3.30 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರಿದ ಪಾಟೀ ಸವಾಲು ವಾದಿ ಪರ ಶ್ರೀ ಎಸ್.ಎನ್.ಜಿ ವಕೀಲವರಿಂದಃ</u>

ನಿಡಿ-10 ದಾಖಲೆಯನ್ನು 2 ನೇ ಪ್ರತಿವಾದಿಯಿಂದ ಪಡೆದುಕೊಂಡಿರುವುದಿಲ್ಲ. ಅದನ್ನು ಮಾಹಿತಿ ಹಕ್ಕ ಕಾಯಿದೆ ಅಡಿಯಲ್ಲಿ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಸ್ವತಃ 2 ನೇ ಪ್ರತಿವಾದಿಯಿಂದ ಕೂಡ Conversion copy ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. Conversion ಆದೇಶದ ಮೂಲ ದಾಖಲೆ 2 ನೇ ಪ್ರತಿವಾದಿಯಿಂದ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ರೂಪಾಯಿ 5,34,914/- ರಂತೆ Conversion charges ನ್ನು 3 ನೇ ಪ್ರತಿವಾದಿ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಬಳಿ Conversion ಆದೇಶದ ಮೂಲ ದಾಖಲೆ ಇದೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ Conversion charges ಕಟ್ಟಬೇಕು ಎಂದು ಸಂಬಂಧಪಟ್ಟ ಅಧಿಕಾರಿಯಿಂದ 3 ನೇ ಪ್ರತಿವಾದಿಗೆ ನೋಟೀಸ್ ಬಂದ ನಂತರ ಅವರು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-10 ರಂತೆ 3 ನೇ ಪ್ರತಿವಾದಿ ಹೆಸರಿಗೆ Conversion Order ಆಗಿದೆ ಎಂದರೆ ಸರಿ. 3 ನೇ ಪ್ರತಿವಾದಿ ವಾದಿಗಳ ಅನುಮತಿಯ ಮೇರೆಗೆ ಅವರ ಹೆಸರಿಗೆ ಲೇ ಔಟ್ ಪ್ಲಾನ್ ಮಂಜೂರು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-35 ರಂತೆ 3 ನೇ ಪ್ರತಿವಾದಿ ಹೆಸರಿನಲ್ಲಿ Conversion Order ಇದೆ ಎಂದರೆ ಸರಿ.

ನಿಪಿ-34 ರ ಪ್ರಕಾರ ವಾದಿಗಳು ನಗದು ಹಣವನ್ನು 3 ನೇ ಪ್ರತಿವಾದಿಗೆ ಕೊಟ್ಟಿದ್ದು ಅದರಂತೆ ಡಿಡಿ ಸಂಖ್ಯೆ 4066 ಕೆನರಾ ಬ್ಯಾಂಕ್, ಜಯನಗರ ಶಾಖೆ, ಬಿ.ಎಮ್.ಐ.ಸಿ.ಪಿ ಪರವಾಗಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಹಣ ನೀಡಿದ ಬಗ್ಗೆ 3 ನೇ ಪ್ರತಿವಾದಿ ಹೆಸರಿಗೆ ರಶೀದಿ ನಿಪಿ-34 ರಂತೆ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಹಣವನ್ನು 2 ನೇ ಪ್ರತಿವಾದಿ ಕೊಟಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಹಣ ನೀಡಿದ ಬಗ್ಗೆ ದಾಖಲೆ ನಮ್ಮ ಬಳಿ ಇರುವುದಿಲ್ಲ. 3 ನೇ ಪ್ರತಿವಾದಿ ಅವರ ಖಾತೆಯಿಂದ ಹಣವನ್ನು ಬಿ.ಎಮ್.ಐ.ಸಿ.ಪಿ ಪಾವತಿಸಿದ್ದರೂ ಕೂಡ 2 ನೇ ಪ್ರತಿವಾದಿಯವರು ಹಣ ನೀಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಓಎಸ್ 123/1994 ದಾವೆ ಸಲ್ಲಿಸಿದ ನಂತರ 3 ನೇ ಪ್ರತಿವಾದಿ ಮತ್ತು ವಾದಿಗಳಿಗೆ ಗೊತ್ತಾಗಿದ್ದು 3 ನೇ ಪ್ರತಿವಾದಿ ವಕೀಲರ ಮೂಲಕ ಈ ಕೇಸಿನ 2 ನೇ ಪ್ರತಿವಾದಿಗೆ ನೋಟೀಸ್ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-21 ರಲ್ಲಿ ಇರುವ 2 ನೇ ಪ್ರತಿವಾದಿಯ ವಿಳಾಸ ಮತ್ತು ನಮ್ಮ ಕ್ರಯಪತ್ರದಲ್ಲಿ ನಿಪಿ-24 ರಲ್ಲಿ ಇರುವ 2 ನೇ ಪ್ರತಿವಾದಿಯ ವಿಳಾಸ ಒಂದೇ ಆಗಿರುತ್ತದೆ ಎಂದರೆ ಸರಿ. ನಿಪಿ-18 ರಿಂದ ನಿಪಿ-21 ದಾಖಲೆಗಳಲ್ಲಿ 2 ನೇ ಪ್ರತಿವಾದಿಯ ವಿಳಾಸ ಒಂದೇ ಆಗಿರುತ್ತದೆ ಎಂದರೆ ಸರಿ. ಸದರಿ ನೋಟೀಸ್ ಕಳುಹಿಸಿದ ನಂತರ 3 ನೇ ಪ್ರತಿವಾದಿ ನಿಪಿ-23 ರಂತೆ ಪತ್ರಿಕಾ ಪ್ರಕಟಣೆ ಮೂಲಕ ಜಿಪಿಎಯನ್ನು ರದ್ದು ಗೊಳಿಸಿರುತ್ತಾರೆ ಎಂದರೆ ಸಾಕ್ಷಿಯು ಅದರಲ್ಲಿರುವ ಜಿಪಿಎ ಈ ದಾವೆಗೆ ಸಂಬಂಧಪಟ್ಟದ್ದಲ್ಲ ಎಂದು ನುಡಿಯುತ್ತಾರೆ. ನಿಪಿ-23 ರಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪತ್ರಿಕಾ ಪ್ರಕಟಣೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಧೃಡೀಕೃತ ದಾಖಲೆಯನ್ನುತೋರಿಸಲಾಗಿ ಓಎಸ್ 78/2006

ದಾವೆಯಲ್ಲಿ ಬಿಡದಿ ಪೋಲೀಸ್ ಠಾಣೆಗೆ ನಿಡಿದ ದೂರಿನ ದಾಖಲೆಯನ್ನು ಹಾಜರುಮಾಡಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಸಿ.ಮಿಸ್ **766/2005** ದಿನಾಂಕ **21-12-2005** ಎಂದು ನಮೂದಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ಒಪ್ಪಿದ ಕಾರಣ ನಿಪಿ-**68** ಎಂದು ಗುರುತಿಸಲಾಯಿತು. ಆನಂತರ ಪೋಲೀಸಿನವರು ವಾದಿಗಳ್ನು ಮತ್ತು ಪ್ರತಿವಾದಿಗಳನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿ ದೂರನ್ನು ಮುಕ್ತಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-**3** ದಾಖಲೆಯನ್ನು **3** ನೇ ಪ್ರತಿವಾದಿ ಪೋಲೀಸಿನವರಿಗೆ ತೋರಿಸಿ ವಿಚಾರಣೆ ಮುಗಿಸಿ ವಾಪಸ್ಸು ತೆಗೆದುಕೊಂಡು ಹೋಗಬೇಕಾದರೆ ನಮ್ಮ ಕಡೆಯವರು ದಿ:**31-12-2005** ರಂದು ಅವರನ್ನು ಕರೆದು ಅವರ ಬಳಿ ಇದ್ದ ಬ್ಯಾಗನ್ನು ಕಿತ್ತು ಕೊಂಡು ನಿಡಿ-**3** ದಾಖಲೆಯನ್ನು ಕಸಿದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆ ದಿನ ದೂರು ಕೊಟ್ಟಾಗ ನಾವು ಉಪಯೋಗಿಸಿದ ಕಾರಿನ ನಂಬರ್ ಅನ್ನು **3** ನೇ ಪ್ರತಿವಾದಿ ಪೋಲೀಸರಿಗೆ ತಿಳಿಸಿದ್ದು ನಂತರ ಅದರ ವಾಹನ ಸಂಖ್ಯೆ ಜೆಸಿಬಿಗೆ ಸಂಬಂಧಪಟ್ಟದ್ದಾಗಿರುತ್ತದೆ ಎಂದು ಪೋಲೀಸರ ವಿಚಾರಣೆಯಲ್ಲಿ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-**31** ಅದಕ್ಕೆ ಸಂಬಂಧಪಟ್ಟಂತ ಪೋಲೀಸರಿಗೆ ಕೊಟ್ಟಿರುವ ದೂರಿನ ಸ್ವೀಕೃತಿ ಎಂದರೆ ನನಗೆ ಗೊತ್ತಿಲ್ಲ. ದಾಖಲೆಗಳು ಒಂದು ಸಾರಿ ನೊಂದಣಿಯಾದ ನಂತರ ನೊಂದಣಿ ಅಧಿಕಾರಿ ಅನುಮತಿ ಇಲ್ಲದೇ ದಾಖಲೆಯಲ್ಲಿ ಯಾವುದೇ ಬದಲಾವಣೆಗಳು ಆಗುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ನಿಡಿ-**3** ದಾಖಲೆ ತೋರಿಸಲಾಗಿ ಲಿಂಗಪ್ಪ ಪಡೆದುಕೊಂಡಿರುತ್ತಾರೆ ಎಂದು ಇದೆ ಎಂದರೆ ಸಾಕ್ಷಿಯು ಆ ರೀತಿ ಇದೆ ಅದನ್ನು **3** ನೇ ಪ್ರತಿವಾದಿ ಪಡೆದುಕೊಂಡು **2** ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಕ್ರಯಪತ್ರದಲ್ಲಿ

ನಿಡಿ-3 ಮೂಲ ದಾಖಲೆಯನ್ನು ಪಡೆದುಕೊಂಡಿರುವ ಬಗ್ಗೆ ನಮೂದಾಗಿರುತ್ತದೆಯಾ ಎಂದರೆ ಸಾಕ್ಷಿಯು ಅದರ ಬಗ್ಗೆ ನಮೂದಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಕ್ರಯಪತ್ರದಲ್ಲಿ Conversion ಆದೇಶದ ಮತ್ತು lay out approval ಬಗ್ಗೆ ಮೂಲ ದಾಖಲೆ ನೀಡಿರುವ ಬಗ್ಗೆ ನಮೂದಾಗಿರುವುದಿಲ್ಲ ಎಂದರೆ ಸರಿ. ನಿಡಿ-3 ದಾಖಲೆಯನ್ನು 3 ನೇ ಪ್ರತಿವಾದಿಯಿಂದ ಕಸಿದುಕೊಂಡು ನೊಂದಣಿ ಅಧಿಕಾರಿ ಅನುಮತಿ ಇಲ್ಲದೇ ದಾಖಲೆಯಲ್ಲಿ ತಿದ್ದು ಪಡಿ ನಾವೇ ನಮ್ಮ ಅನುಕೂಲಕ್ಕೆ ತಕ್ಕಂತೆ ತಿದ್ದು ಪಡಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರಿದ ಪಾರ್ಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಕೆ. ಶ್ರೀವಿದ್ಯಾ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.